ಹೆಗ್ಗೋಡಿನ ಜುಬ್ಬಾವನ್ನೇ ಖರೀದಿಸುತ್ತೇನೆ' ಎನ್ನುತ್ತಾರೆ ಕೃಷಿಕ ಮಹೇಶ್ ಕುಮಾರ್. ಇವರು ಅಡಿಕೆ ಬೆಳೆಗಾರರ ಸಂಘದ ಕಾರ್ಯದರ್ಶಿ. ಅಡಿಕೆ ವರ್ಣದ ಸೀರೆಗಳಿಗೂ ಬೇಡಿಕೆ. ಒಂದೊಂದು ಸೀರೆಗೆ ರೂ. 1250ರಿಂದ 1600. ಗಾಢವಲ್ಲದ ಕಂದು ಬಣ್ಣವು ಅನೇಕರಿಗೆ ಇಷ್ಟ. ಚರಕ ಉತ್ಪಾದಿಸುವ ಖಾದಿ ಸೀರೆಗಳಲ್ಲಿ ಶೇ. 25ರಷ್ಟು ಅಡಿಕೆ ಬಣ್ಣ. ರಾಸಾಯನಿಕ ಬಣ್ಣಗಳ ಅಡ್ಡ ಪರಿಣಾಮಗಳನ್ನು ಲಕ್ಷಿಸಿದ ಚರಕ ಸಂಸ್ಥೆಯು 2007ರಿಂದ ನೈಸರ್ಗಿಕ ಬಣ್ಣಗಳನ್ನು ಬಳಸುತ್ತಿದೆ. 'ದೇಸಿ ಪ್ರಸನ್ನ'ರು ಚರಕ ಸಂಸ್ಥೆಯ ರೂವಾರಿ. ಇವರ ಪಾರಿಸರಿಕ ದೂರದೃಷ್ಟಿಯಿಂದಾಗಿ ಇಲ್ಲಿ ನೈಸರ್ಗಿಕ ಬಣ್ಣಗಳಿಗೆ ಮೊದಲ ಮಣೆ.

ಚರಕ ಸಂಸ್ಥೆಯು ನೇರವಾಗಿ ಅಡಿಕೆಯನ್ನು ಬಣ್ಣಕ್ಕೆ ಬಳಸುವುದಿಲ್ಲ. ಪ್ರತಿ ವರ್ಷ ಸುಮಾರು ಎರಡೂವರೆಯಿಂದ ಮೂರು ಸಾವಿರ ಲೀಟರಿನಷ್ಟು ದ್ರಾವಣದಂತಿರುವ ಚೊಗರನ್ನು ಸ್ಥಳೀಯವಾಗಿ ಸಂಗ್ರಹಿಸುತ್ತದೆ. ಈ ಭಾಗದ ಪ್ರತಿ ಕೃಷಿಕರ ಮನೆಗಳಲ್ಲಿ ಚೊಗರು ತಯಾರಾಗುತ್ತದೆ. ಅವರಿಂದ ಮಧ್ಯವರ್ತಿಗಳು ಕೊಂಡು ದಪ್ಪನಾಗಿಸಿ ಮಾರುತ್ತಾರೆ. ಈ ಚೊಗರಿಗೆ ಹಿಂದೆ ಲೀಟರಿಗೆ ಅರವತ್ತರಿಂದ ಎಪ್ಪತ್ತು ರೂಪಾಯಿಗಳಿತ್ತು. ಈಗ ಎರಡು ಪಟ್ಟಾಗಿದೆ. ಬಟ್ಟೆಗೆ ಬಣ್ಣ ಹಾಕುವಲ್ಲಿ ಎರಡು ವಿಧಾನಗಳು. ಒಂದು, ನೂಲಿಗೆ ಬಣ್ಣ ಹಿಡಿಸಿ, ಬೇಕಾದ ವಿನ್ಯಾಸದಲ್ಲಿ ನೇಯುವುದು. ಮತ್ತೊಂದು, ದಪ್ಪ ಪೇಸ್ಟಿನಂತಿರುವ ಬಣ್ಣವನ್ನು ತಯಾರಾದ ಬಟ್ಟೆಯ ಮೇಲೆ ಅಚ್ಚೊತ್ತುವುದು. ಈ ವಿಧಾನಕ್ಕೆ 'ಬ್ಲಾಕ್ ಪ್ರಿಂಟಿಂಗ್' ಎನ್ನುತ್ತಾರೆ.

ಚರಕದ ವ್ಯವಸ್ಥೆಯ ಬಗ್ಗೆ ಹೇಳಲೇಬೇಕು. ಹೆಗ್ಗೋಡಿನ ವಸ್ತ್ರೋದ್ಯಮದ ವಿಚಾರ ಮಾತನಾಡುವಾಗ 'ಚರಕ ಮತ್ತು ದೇಸಿ' ಎಂಬ ಎರಡು ಪದಗಳನ್ನು ಬಳಕೆ ಮಾಡುತ್ತೇವೆ. 'ಚರಕ ವಿವಿಧೋದ್ದೇಶ ಕೈಗಾರಿಕಾ ಸಂಘ' ಎನ್ನುವುದು ಮಾತೃಸಂಸ್ಥೆ. 'ದೇಸಿ' ಇದರ ಮಾರುಕಟ್ಟೆಯ ವ್ಯಾಪಾರಿ ಹೆಸರು. ಚರಕ ಉತ್ಪಾದಿಸಿದ ಬಟ್ಟೆಗಳನ್ನು ಮಾರಾಟ ಮಾಡುವ ಸಂಸ್ಥೆ 'ದೇಸಿ ಟ್ರಸ್ಟ್'.

ಯಾರೂ ಗಮನಹರಿಸದ ಚೊಗರಿಗೆ ಮಾನ ತಂದಿರುವುದು ಚರಕ ಸಂಸ್ಥೆ. ಗ್ರಾಹಕರಿಗೆ 'ಇದು ಅಡಿಕೆಯ ಬಣ್ಣದ ಜುಬ್ಬಾ' ಅಂದಾಗ ಸಂತೋಷಪಡುವವರ ಸಂಖ್ಯೆ ದೊಡ್ಡದಿದೆ. ಆದರೆ ಅಡಿಕೆ ಬಣ್ಣವೆಂದು ಅರಿಯದೆ ಇದರ ಅಂಗಿ ಧರಿಸುವ ಅಡಿಕೆ ಕೃಷಿಕರೂ ಇದ್ದಾರೆ!

ಮೇಲುಕೋಟೆಯ 'ಜನಪದ ಸೇವಾ ಟ್ರಸ್ಟ್', ಅಲ್ಲಿನ ನೇಕಾರರ ಜತೆ ಸೇರಿಕೊಂಡು ಖಾದಿ ಬಟ್ಟೆಗಳನ್ನು ತಯಾರಿಸುತ್ತದೆ. ಈ ಸಂಸ್ಥೆಗೆ ಈಗ ಅರವತ್ತೆರಡು ವರುಷ. ಪ್ರಸ್ತುತ ಸಂತೋಷ ಕೌಲಗಿಯವರ ಸಾರಥ್ಯ. ಆರಂಭದಲ್ಲಿ ಚಿಕ್ಕ ಚಿಕ್ಕ ಮಗ್ಗಗಳಲ್ಲಿ ಬಟ್ಟೆಗಳು ತಯಾರಾಗುತ್ತಿದ್ದುವು. ಅಲ್ಲಿ ತಯಾರಾಗುತ್ತಿದ್ದ ಪ್ರಸಿದ್ಧ ಉತ್ಪನ್ನ 'ಬಗಲ ಚೀಲ'. ನೈಸರ್ಗಿಕ ಬಣ್ಣಗಳೊಂದಿಗೆ ಅಡಿಕೆ ಬಣ್ಣಕ್ಕೂ ಸ್ಥಾನ, ಮಾನ.

### ಮೀನುಬಲೆಯ ಆಯುಷ್ಯವೃದ್ಧಿ

ಎಳೆ ಅಡಿಕೆಯ ಸಿಪ್ಪೆ ತೆಗೆದು, ತಿರುಳನ್ನು ಮೂರು ಗಂಟೆ ಬೇಯಿಸಿ ಗ್ರೈಂಡರಿನಲ್ಲಿ ರುಬ್ಬಿ, ಸೋಸಿದರೆ ಚೊಗರು ರೆಡಿ. ಯಂತ್ರದಲ್ಲಿ ರುಬ್ಬಿದರೆ ತ್ಯಾಜ್ಯ ಕಡಿಮೆ. ಇವರು ಸಂಶೋಧನೆಗಾಗಿ ಮಾಡಿದ ಚೊಗರಿನ ವಿಧಾನವಿದು. ಹತ್ತಿಯ ಮೀನು ಬಲೆಯನ್ನು ಪ್ರತಿ ವರ್ಷ ಚೊಗರಿನಲ್ಲಿ ಅದ್ದಿ, ಒಣಗಿಸಿದರೆ ಬಲೆಯ ತಾಳಿಕೆ ಮತ್ತು ಗಟ್ಟಿತನ ಹೆಚ್ಚುತ್ತದೆ. ಇದು ಗೆದ್ದಲು ನಿರೋಧಕ ಕೂಡ ಎನ್ನುತ್ತಾರೆ ಬದನಾಜೆ ಶಂಕರ ಭಟ್. ಇವರು ಅಡಿಕೆಯ ವೈನ್, ಅಡಿಕೆಯ ಪಾನೀಯ, ಸಾಬೂನು, ಮಹಾಳಿ ರೋಗಕ್ಕೆ ಔಷಧವನ್ನು ಸಂಶೋಧಿಸಿದವರು.

### ಚೊಗರಿನ ನವರೂಪ: ನಟ್‌ಬ್ರೌನ್ ಬಣ್ಣ

ಸಾಗರದ ಕೃಷಿಕ ಸಂತೋಷ್‌ಕುಮಾರ್ ಇವರಿಗೆ ರೈಲಿನ 'ಜಾಗೃತಿ ಯಾತ್ರೆ'ಯೊಂದರಲ್ಲಿ ಪರಿಚಯವಾದವರು ರಾಜಸ್ಥಾನದ ಸಂಕಲ್ಪ್ ಸೋಧಾನಿ. ಜೋಧ್‌ಪುರದಲ್ಲಿರುವ ಇವರಣ್ಣನ 'ಸೊಧಾನಿ ಬಯೋಟೆಕ್ ಪ್ರೈ. ಲಿ.,' ನೈಸರ್ಗಿಕ ಬಣ್ಣಗಳನ್ನು ತಯಾರಿಸುವ ಉದ್ಯಮ. ಇವರಿಗೆ ಅಡಿಕೆಯ ಬಣ್ಣ ಹೊಸತು. ಸಂತೋಷ್ ಮೂಲಕ ಚೊಗರು ಪಡೆದುಕೊಂಡು ಹಲವು ಪ್ರಯೋಗಗಳನ್ನು ಮಾಡಿದರು.

2017ರಲ್ಲಿ ಉದ್ಯಮವು ಸಂತೋಷರಿಗೆ ಚೊಗರಿಗೆ ಆರ್ಡರ್ ಮಾಡಿತು. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಸುಮಾರು ಏಳು ಟನ್ ಚೊಗರು ಜೋಧ್‌ಪುರ ಸೇರಿತು. ಸಾಗಾಟವು ಹೇಳಿದಷ್ಟು ಸುಲಭವಾಗಿದ್ದಿರಲಿಲ್ಲ. ಕೊರಿಯರ್, ಅಂಚೆಗಳು ದ್ರವರೂಪದ ಉತ್ಪನ್ನಗಳನ್ನು ಸಾಗಿಸುವುದಿಲ್ಲ. ಲಾರಿಗಳು ಕೂಡಾ ಸ್ಪಂದಿಸಲಿಲ್ಲ. ಬಸ್ಸಿನ ಟಾಪಿಗೆ ಏರಿಸುವುದು ರಟ್ಟೆಬಲದ ಕೆಲಸ. ಒಮ್ಮೆಗೆ ಹೇಗೋ ನಿಭಾಯಿಸಬಹುದು. ಸಂತೋಷರಿಗೆ ಸವಾಲಿನ ಮೇಲೆ ಸವಾಲು. ಚೊಗರು ದ್ರವರೂಪದಲ್ಲಿರುವುದೇ ಸಾಗಾಟಕ್ಕೆ ಸಮಸ್ಯೆ. ಪರ್ಯಾಯ ಹಾದಿಯ ಹುಡುಕಾಟ. ಎಳೆಯ ಅಡಿಕೆಯನ್ನು ಮಿಕ್ಸಿಯಲ್ಲಿ ಪುಡಿ ಮಾಡಿ, ಶೋಧಿಸಿ ಬಯೋಟೆಕ್‌ಗೆ ಕಳುಹಿಸಿಕೊಟ್ಟರು. ಮೊದಲ ಯತ್ನದಲ್ಲಿ ಅನುತ್ತೀರ್ಣ. ಒಣಗಿಸಿ ಪುಡಿ ಮಾಡಿ ಕಳುಹಿಸಿದರು. ಉಹೂಂ... ಫೇಲ್! ಕೊನೆಗೆ ಉದ್ಯಮವೇ ಚೊಗರಿನ 'ಸ್ಪ್ರೇ ಡ್ರೈ' ಮಾಡಿತು. ಹೀಗೆ ಮಾಡಿದಾಗ ಅದು ನುಣ್ಣನೆಯ ಪುಡಿಯಾಯಿತು. ಇದು 'ಬಣ್ಣದ ಪರೀಕ್ಷೆ'ಯಲ್ಲಿ ಉತ್ತೀರ್ಣಗೊಂಡಿತು. ಈ ಪುಡಿಗೆ 'ನಟ್ ಬ್ರೌನ್' ಎಂದು ಹೆಸರು.

2019ರಿಂದ 'ಸೊಧಾನಿ ಬಯೋಟೆಕ್' ಸಂಸ್ಥೆಯು ಅಡಿಕೆಯ 'ನಟ್ ಬ್ರೌನ್' ಪುಡಿಯನ್ನು ರಫ್ತು ಮಾಡುತ್ತಿದೆ. ಅಮೆರಿಕ, ಆಸ್ಟ್ರೇಲಿಯಾ, ಫ್ರಾನ್ಸ್, ಯೂರೋಪ್, ಟರ್ಕಿ, ಚೀನಾ ದೇಶಗಳಿಗೆ 'ನಮ್ಮೂರ ಅಡಿಕೆ ಬಣ್ಣ' ರಂಗೇರಿಸುತ್ತಿದೆ. ಈ ಎಲ್ಲಾ ಯಶದ ಕೀರ್ತಿ ಸಂತೋಷ ಕುಮಾರ್ ಅವರಿಗೆ ಸಲ್ಲಬೇಕು. ಇವರು ಮೂಲತಃ ಸಾಗರದ 'ಹವ್ಯಕ ಕೃಷಿ ಉದ್ಯೋಗ್ ಅಂಡ್ ಇಂಡಸ್ಟ್ರೀಸ್ ಲಿ.,' ಇದರ ಉದ್ಯೋಗಿ. ಸಂಸ್ಥೆಯ ವರಿಷ್ಠರು ಇವರ ಕಾಯಕಕ್ಕೆ ಪ್ರೋತ್ಸಾಹಕರು. ಈಗ ಸಂಸ್ಥೆಯೇ ಸೊಧಾನಿ ಬಯೋಟೆಕ್‌ಗೆ ಚೊಗರನ್ನು ರವಾನಿಸುತ್ತಿದೆ.

### ವಿಶ್ವಕ್ಕೆ ಚಾಚಿದ ಅಡಿಕೆ ನಂಟು

ನಮ್ಮ ನೆರೆಯ ದೇಶ ಭೂತಾನ್. ಇಲ್ಲಿ ಮೂರು ಸಂಸ್ಥೆಗಳು ಅಡಿಕೆಯ ವರ್ಣವನ್ನು ವಸ್ತ್ರೋದ್ಯಮದಲ್ಲಿ ಬಳಸುತ್ತಿವೆ. ಇಲ್ಲಿ ಅಡಿಕೆ ಕೃಷಿಯಿದೆ. ಅಡಿಕೆಯ ಮಾರಾಟ ಹೊರತು



ಅಡಿಕೆ ಬಣ್ಣದ ಶರ್ಟಿಂಗ್ ಬಟ್ಟೆ